'ರಸ್ತೆಯಲ್ಲಿ ನೆತ್ತರು ಚೆಲ್ಲಿರುವಾಗ ಪ್ರೇಮದ ಬಗೆಗೆ ಬರೆಯುವುದಾದರೂ ಹೇಗೆ?' ಎನ್ನುವ ಮಾತನ್ನು ಸ್ಪ್ಯಾನಿಶ್ ಕವಿ ನೆರುಡಾ ಕೇಳುತ್ತಾನೆ. ಹೌದು. ಇಲ್ಲಿ ಹಸಿವು, ಬಡತನ, ಮತೀಯ ಮತ್ಸರ, ಮೌಢ್ಯ, ಅಸ್ಪೃಶ್ಯತೆ ಕುಣಿಕುಣಿಯುತ್ತಿರುವಾಗ ನಿಜ ಕವಿಯೊಬ್ಬ ಅದು ಹೇಗೆ ತಾನೇ ಸ್ಪಂದಿಸದೇ ಇರಬಲ್ಲ? ಹಾಗೆ ಇದ್ದರೂ ಅವನು ತನಗೆ ತಾ ಕವಿಯಾಗಬಹುದೇ ವಿನಃ, ಸಮಾಜ ಕಟ್ಟುವ ಇಟ್ಟಿಗೆಯಾಗಲಾರ. ಹಾಗೆ ಸ್ಪಂದಿಸುವ ಕವಿ ಪ್ರೇಮವನ್ನು ಬಂಧಿಸಿಟ್ಟ ಮೂಲಭೂತ ಶಕ್ತಿಗಳಿಂದ ವಿಮೋಚನೆಗೆ ದಾರಿಯಾಗುತ್ತಾನೆ. ಬರೆಯದೇ ಉಳಿದ ಪ್ರೇಮಕವಿತೆಯೊದು ಜನರ ಎದೆಗಳಲ್ಲಿ ಹಾಡಾಗುತ್ತದೆ.

ನನ್ನ ಸಮಕಾಲೀನ ಸಾಕಷ್ಟು ಕವಿಗಳು ಪ್ರೇಮಕಾಮದ ಕವಿತೆಗಳನ್ನು ಬರೆದಿದ್ದಾರೆ. ಆರಿಫ್ ರಾಜಾ, ಪ್ರವರ ಕೊಟ್ಟೂರು, ರಾಜೇಂದ್ರ ಪ್ರಸಾದ್, ಹರವು ಸ್ಫೂರ್ತಿ, ಕಾವ್ಯಾ ಕಡಮೆ ಇವರೆಲ್ಲರ ಅನೇಕ ಕವಿತೆಗಳು ಪ್ರೇಮದ ಉತ್ಕಟತೆಯನ್ನು ಓದುಗರಿಗೂ ದಾಟಿಸಿದ್ದಾರೆ.

ಹರವು ಸ್ಫೂರ್ತಿಯವರ–

ಜೋರು ಮಳೆ
ಖುಷಿ ನನಗೆ
ನೆನೆದು ನಿನ್ನೆದುರು ನಿಂತೆ
ನಾನು ತೊಯ್ದೆ
ನೀನು ಬೆವತೆ

★

ರಾಜೇಂದ್ರ ಪ್ರಸಾದ್ ಅವರ–

ಅವಳೋ ಹಳೇ ವಚನಕಾರ್ತಿ
ದುಂಬಿಗೆ ಹೂವಲ್ಲ
ಪರಾಗ ನನ್ನಿಂದಲೇ
ಎನ್ನುತ್ತಾ ಎದೆಯೇರಿದಳು
ರಾತ್ರಿಯೆಂಬುದೂ
ಈಗ ತಪ್ಪಿಹೋದ ತರ್ಕ

ಪ್ರೇಮಕ್ಕೆ ಯಾವ ಎಲ್ಲೆಯಿಲ್ಲ, ಇನ್ನು ವಯಸ್ಸಿನ ಮಾತುಂಟೇ? ಯುವಜನರ ಪ್ರೇಮ ತಲ್ಲಣಗಳ ನಾಡಿ ಮಿಡಿತವರಿತ ಜಯಂತ ಕಾಯ್ಕಿಣಿ, ಯೋಗರಾಜ್ ಭಟ್ ಮುಂತಾದವರು ಚಿತ್ರಸಾಹಿತ್ಯದಲ್ಲೂ ತಮ್ಮ ಛಾಪು ಇಳಿಸಿದ್ದಾರೆ.

'ನೀನೆಂದರೆ ನನ್ನೊಳಗೆ ಏನೋ ಒಂದು ಸಂಚಲನ
ನಾ ಬರೆಯದ ಕವಿತೆಗಳ ನೀನೇ ಒಂದು ಸಂಕಲನ'

ಎಂಬ ಜಯಂತ ಕಾಯ್ಕಿಣಿಯವರ ಹಾಡಿನ ಸಾಲುಗಳು ಎಲ್ಲ ವಯೋಮಾನದ ಎಲ್ಲ ಕಾಲದ ಕವಿಮನಸ್ಸುಗಳ ಮಾತೇ ಆಗಿದೆ.

ನಾನೂ ಹಲವಾರು ಪ್ರೇಮಕವಿತೆಗಳನ್ನು ಬರೆದಿರುವೆ, ಮುಂದೆಯೂ ಅದು ನನ್ನ ಆಪ್ತ ಕಾವ್ಯವಸ್ತುವೇ ಆಗಿರಲಿದೆ. ನನ್ನದೇ ಕೆಲವು ಕವಿತೆಗಳನ್ನು ಇಲ್ಲಿ ಹೇಳುವುದಾದರೆ–